ಕೊಟ್ಟರು. 'ಅಯ್ಯೋ ಅದರಲ್ಲಿ ರಾಜ್ಯದ ಅನೇಕ ಕಡೆ ಖರೀದಿಸಿದ್ದ ನೂರಾರು ಲೇಖಕರ ಸಾವಿರಾರು ಪುಸ್ತಕಗಳು ಮತ್ತು ಕುವೆಂಪು, ಕಾರಂತ, ಲಂಕೇಶ್, ಚನ್ನವೀರ ಕಣವಿಯವರು ಹಸ್ತಾಕ್ಷರ ಹಾಕಿಕೊಟ್ಟಿದ್ದ ಪುಸ್ತಕಗಳು ಇದ್ದವಲ್ಲ!' ಎಂದು ಹಿರಿಯಜ್ಜ ತಲ್ಲಣಿಸಿ ಹೋದ. ಆದರೆ ಪುಸ್ತಕಗಳು ನಾಪತ್ತೆಯಾಗಿ ಮರ್‍ನಾಲ್ಕು ದಿನಗಳೇ ಆಗಿಹೋಗಿದ್ದವು.

ತೋಟ ಸುತ್ತಿ ಮನೆಯ ಬಳಿ ಬಂದ ಹಿರಿಯಜ್ಜನಿಗೆ ಆಘಾತವಾಗುವಂತೆ ಮೂರ್‍ನಾಲ್ಕು ಗಂಟೆಗಳ ಹಿಂದೆ ಹೊಂಗೆ ಮರವಿದ್ದ ಜಾಗ ಈಗ ಸಂಪೂರ್ಣ ಬರಿದಾಗಿತ್ತು. ಮನೆಯವರೆಲ್ಲರೂ ಸೇರಿ ಮಾಡಿದ ಮೋಸ ಅವನಿಗೆ ಸಿಟ್ಟು, ಬೇಸರ, ಜುಗುಪ್ಸೆ ತಂದಿತು. ತನ್ನೆಲ್ಲ ಭಾವನೆಗಳನ್ನು ತಹಬಂದಿಗೆ ತಂದುಕೊಂಡು ಏನೂ ಮಾತಾಡದೆ ಮೌನವಾದ. ಅಲ್ಲಿ ಮನೆ ಚೆಂದಗಾಣಿಸಲು ಹೊಸತಾಗಿ ತರಿಸಿ, ಸಾಲಾಗಿ ಜೋಡಿಸಿದ್ದ ಹತ್ತಿಪ್ಪತ್ತು ಹೂಗಿಡಗಳ ಕುಂಡಗಳಿದ್ದವು. ಅವುಗಳ ನಡುವೆ ಅನಾಥವಾಗಿ ಒಣಗುತ್ತಾ ಬಿದ್ದಿದ್ದ ತನ್ನ ಪ್ರೀತಿಯ ಹೊಂಗೆ ಮರದ ನಾಲ್ಕಾರು ಎಲೆಗಳನ್ನು ಎತ್ತಿಕೊಂಡು ಕಣ್ಣಿಗೊತ್ತಿಕೊಂಡ. ಆಕಾಶಕ್ಕೆ ಮುಖ ಮಾಡಿ ತಪ್ಪಾಯ್ತು ಎಂದು ಕೆನ್ನೆಗೆ ಹೊಡೆದುಕೊಂಡ. ಹಿರಿಯಜ್ಜನ ಕಣ್ಣಲ್ಲಿ ನೀರಿರಬಹುದೆಂದು ಹೆದರಿ ಬಾಲೆ ಅವನ ಕಣ್ಣು ದಿಟ್ಟಿಸದಾದಳು.

ಸ್ನಾನ ಮಾಡಲು ಬಚ್ಚಲು ಕಡೆ ಹೊರಟ ಹಿರಿಯಜ್ಜನಿಗೆ ನವೀಕರಣಗೊಂಡ ಇಟಾಲಿಯನ್ ಕಿಚನ್ ಕಂಡಿತು. ಅದರ ವ್ಯವಸ್ಥಿತ ಸ್ಥಿತಿಗೆ, ಅಚ್ಚುಕಟ್ಟುತನಕ್ಕೆ, ಸ್ವಚ್ಛತೆಗೆ ಭಯವಾಯಿತು. ನೀರು ಕುಡಿಯಲು ಒಂದು ಲೋಟ ಸಹ ಕಣ್ಣಿಗೆ ಬೀಳಲಿಲ್ಲ. ಒಂದು ಬೆಂಕಿ ಕಡ್ಡಿ ಸಹ ಹೊರಗೆ ಇರದೆ ಯಾವ್ಯಾವುದೋ ಖಾನೆ ಸೇರಿದ್ದವೆಂದು ಕಾಣುತ್ತದೆ. ಗಲೀಜಾಗುತ್ತದೆ ಎಂದು ಹೆದರಿ ಅಜ್ಜ ಏನನ್ನೂ ಮುಟ್ಟದೆ ನೀರು ಸಹ ಕುಡಿಯದೆ ಬಚ್ಚಲಿನತ್ತ ಮುಂದುವರೆದ.

ಹಿರಿಯಜ್ಜನ ಸೂಚನೆಯಂತೆ ಬಾಲೆಯು ಪಟಾಪಟಿ ನಿಕ್ಕರು, ಬನಿಯನ್ನು, ಪಂಚೆ, ಟವಲ್ಲು ತಂದುಕೊಟ್ಟಳು. ನವೀಕರಿಸಿದ್ದ ಬಚ್ಚಲು ಮನೆ ಒಳಹೊಕ್ಕವನೇ ಹಿರಿಯಜ್ಜ ಕಕ್ಕಾಬಿಕ್ಕಿಯಾಗಿ ಹೋದ. ಟಿವಿಯಲ್ಲಿ ನೋಡಿದ್ದ ಪಂಚತಾರಾ ಹೋಟೆಲ್ಲಿನ ರೂಮನ್ನು ಹೊಕ್ಕಂತಾಯಿತು. ಯಾರೂ ಸಹ ಅದನ್ನು ಬಚ್ಚಲು ಅಥವಾ ಕಕ್ಕಸು ರೂಮು ಎಂದು ಹೇಳದಂತೆ ಭವ್ಯವಾಗಿತ್ತು. ಅಲ್ಲಿದ್ದ ನಲ್ಲಿಗಳು, ಶವರ್, ಲೈಟುಗಳು, ಕಟ್ಟೆಯ ಮೇಲಿದ್ದ ಸೋಪು, ಶ್ಯಾಂಪೂ, ಕಂಡೀಷನರ್, ಕೇಶದ ಬಣ್ಣ, ಆಫ್ಟರ್ ಶೇವ್, ಹಲವಾರು ಟೂತ್‌ಪೇಸ್ಟ್, ಬ್ರಶ್, ಶೇವಿಂಗ್ ಕ್ರೀಮ್, ರೇಜರ್ ಇತ್ಯಾದಿ ನೋಡುನೋಡುತ್ತ ಅಜ್ಜನಿಗೆ ಶೂನ್ಯ ಆವರಿಸಿತು.

'ತಾನೆಲ್ಲಿಗೆ ಬಂದುಬಿಟ್ಟೆ!' ಎಂದು ಹಿರಿಯ ಹಿಂದಕ್ಕೆ ತಿರುಗಿ ಅವಸರಿಸಿ ಹೊರಟ. ಬಚ್ಚಲಿನ ನೆಲಕ್ಕೆ ಹೊಸತಾಗಿ ಹಾಕಿದ್ದ ನಯಸ್ಸಾಗಿದ್ದ ಟೈಲ್ಸ್‌ಗಳು ಫಳಫಳ ಹೊಳೆಯುತ್ತಿದ್ದವು. ಹಿರಿಯಜ್ಜನ ಅವಸರದ ಅದೃಢವಾಗಿದ್ದ ಗಲಿಬಿಲಿಯ ಎಡಪಾದ ಜರ್‍ರನೆ ಜಾರಿತು. ಅರೆ ಅರೆ ಎನ್ನುತ್ತ ಬಲಪಾದವನ್ನೂರಿದ. ಅದೂ ವಿರುದ್ಧ ದಿಕ್ಕಿನಲ್ಲಿ ಜಾರಿತು. ಹಿರಿಯಜ್ಜ ಗಾಳಿಯಲ್ಲಿ ಹಿಂದಕ್ಕೆ ಪಲ್ಟಿ ಹೊಡೆದು ಬಿದ್ದುಬಿಟ್ಟ. ಅವನ ಕೂದಲಿಲ್ಲದ ಬಕ್ಕ ತಲೆ ಟೈಲ್ಸಿನ ನೆಲಕ್ಕೆ ಈಡುಗಾಯಿ ಹೊಡೆದಂತೆ ಅಪ್ಪಳಿಸಿತು. ಕಣ್ಣು ಮಿಟುಕಿಸುವುದರ ಒಳಗೆ ತಲೆಯ ಸೀಳಿಂದ ನೆತ್ತರಿನ ಕಾಲುವೆಯೊಂದು ಹರಿಯತೊಡಗಿತು. ಕಮಕ್ ಕಿಮಕ್ ಎನ್ನದೆ ಹಿರಿಯಜ್ಜನ ಪ್ರಾಣ ಹೊರಟುಹೋಗಿತ್ತು. ಮನೆಯ ಎಲ್ಲರೂ ಹಿರಿಯಜ್ಜನ ದೇಹವನ್ನು ಮನೆಯೊಳಗೆ ತಂದು ಹಾಲಲ್ಲಿ ಮಲಗಿಸಿ ಸುತ್ತಲೂ ನಿಂತರು. ಎರಡು ನಿಮಿಷದ ಕೆಳಗೆ ವ್ಯಥೆ ಪಡುತ್ತಿದ್ದ ಹಿರಿಯಜ್ಜ ಕೊನೆಯುಸಿರೆಳೆದಿದ್ದ. ಮನೆಯ ಜನರೆಲ್ಲ ಅಳಲೂ ನಾಚಿಕೊಂಡಂತಿದ್ದರು. ಕೊಲೆ ಮಾಡಿದ ಭಾವ ಅವರನ್ನೆಲ್ಲ ಆವರಿಸಿಕೊಳ್ಳತೊಡಗಿತು.

ಅದೇ ಸಮಯದಲ್ಲಿ ಅಮೆರಿಕದಿಂದ ಬಂದ ಫೋನ್ ಕರೆಯನ್ನು ಸ್ವೀಕರಿಸಿದ ಬಾಲೆಗೆ ಅವಳ ಅಮೆರಿಕನ್ ಚಿಕ್ಕಪ್ಪ 'ಈ ಸಲ ಕಾರಣಾಂತರಗಳಿಂದ ಇಂಡಿಯಾಗೆ ಬರಲಾಗುತ್ತಿಲ್ಲ. ದಯಮಾಡಿ ಎಲ್ಲರಿಗೆ ಹೇಳು. ನಾನು ಇನ್ನೊಮ್ಮೆ ಬರಬಹುದಾದ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸುತ್ತೇನೆ. ನಿನ್ನ ಹೆಸರು ನನಗೆ ಮರೆತು ಹೋಗಿದೆ. ದಯಮಾಡಿ ಕ್ಷಮಿಸು ಬೇಬಿ' ಮುಂತಾಗಿ ಹೇಳುವುದು ಕೇಳಿಸುತ್ತಿತ್ತು. ಮನೆಯೆಲ್ಲ ಸ್ತಬ್ಧವಾಗಿ ಯಾವುದೋ ಅಗೋಚರ ಭಾರದಡಿ ತತ್ತರಿಸುವಂತೆ ಕಾಣುತ್ತಿತ್ತು. ●